# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.2184/2014/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:15.3.2017

16

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೊಡ್ಡಬಳ್ಳಾಪುರ ಪಟ್ಟಣದ ವ್ಯಾಪ್ತಿಯಲ್ಲಿ ದೂರುದಾರರ ತಾಯಿ ಎಲ್ ಎಸ್ ಶಾರದಮ್ಮನವರಿಗೆ ಮಂಜೂರಿಯಾದ ಬದಲಿ ನಿವೇಶನ ಖಾತೆ ಸಂಖ್ಯೆ ಸಂ.1448/1288/4798 ರಲ್ಲಿ ವಿಸ್ತೀರ್ಣ 30 X 30 ಅಡಿ ನಿವೇಶನವನ್ನು ಅವರ ಹೆಸರಿನಲ್ಲಿ ಪುನ: ನೊಂದಣಿ ಮಾಡಿ ಅವರಿಗೆ ಸ್ವಾಧೀನ ನೀಡಲು ಸೂಕ್ತ ಕ್ರಮಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.

*******

ಶ್ರೀ ಸಿದ್ದಣ್ಣ ಡಿ.ಎಸ್., ಶ್ರೀ ನಿಜಲಿಂಗಪ್ಪ ಬಡಾವಣೆ, ದಾವಣಗೆರೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಆಯುಕ್ತರು, ದೊಡ್ಡಬಳ್ಳಾಪುರ ನಗರಸಭೆ ಹಾಗೂ ಇತರ ಇಬ್ಬರು ನೌಕರರ(ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ತಮ್ಮ ತಾಯಿ ಎಲ್ ಎಸ್ ಶಾರದಮ್ಮನವರು ದೊಡ್ಡಬಳ್ಳಾಪುರ ಪಟ್ಟಣದ ವ್ಯಾಪ್ತಿಯಲ್ಲಿ ರೋಜಿಪುರ ಖಾತೆ ಸಂ. 491/ 1300/1172/ 4682 ವಿಸ್ತೀರ್ಣ 60 X 60 ಅಡಿ ನಿವೇಶನ ಹೊಂದಿದ್ದು ಅದರಲ್ಲಿ ನಗರ ಸಭೆಗೆ ರಸ್ತೆಗಾಗಿ 10 X 60 ಅಡಿ ನಿವೇಶನ ಬಿಟ್ಟುಕೊಟ್ಟಿರುತ್ತಾರೆ. ಅದರ ಬದಲಿಗೆ ಮಾನ್ಯ ಜಿಲ್ಲಾಧಿಕಾರಿಗಳು ದೂರುದಾರರ ತಾಯಿಗೆ ಖಾತೆ ಸಂ.1448/1288/4798 ರಲ್ಲಿ ವಿಸ್ತೀರ್ಣ 30 X 30 ಅಡಿ ನಿವೇಶನವನ್ನು ಮಂಜೂರು ಮಾಡಿರುತ್ತಾರೆ. ಆದರೆ ಎದುರುದಾರರು ಇದುವರೆಗೆ ನಿವೇಶನವನ್ನು ದೂರುದಾರರ ಸ್ವಾಧೀನಕ್ಕೆ ನೀಡಿರುವುದಿಲ್ಲ. ಎದುರುದಾರರು ಅಧಿಕಾರ ದುರುಪಯೋಗಪಡಿಸಿಕೊಂಡು, ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಬೇರೆ ಯಾರಿಗೋ ನಿವೇಶನವನ್ನು ಮಾರಾಟ ಮಾಡಿರುತ್ತಾರೆ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3. 1 ರಿಂದ 3 ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಮಂಜೂರು ಮಾಡಿದ ನಿವೇಶನವನ್ನು ಎಲ್. ಎಸ್. ಶಾರದಮ್ಮನವರಿಗೆ ನೋಂದಣಿ ಮಾಡಿಕೊಡಬೇಕಾಗಿತ್ತು ಆದರೆ ಅವರು ಆ ನಿವೇಶನವನ್ನು ಡಿ.ಸಿ. ಶಿವಣ್ಣನವರಿಗೆ ನೋಂದಣಿ ಮಾಡಿಕೊಡುವಂತೆ 1ನೇ ಎದುರುದಾರರಿಗೆ ಮುಚ್ಚಳಿಕೆ ಪತ್ರ ಬರೆದುಕೊಟ್ಟ ಕಾರಣ ಅಂದಿನ ಪೌರಾಯುಕ್ತರು ಡಿ. ಸಿ. ಶಿವಣ್ಣನವರಿಗೆ ನೋಂದಣಿ ಮಾಡಿ ಕೊಟ್ಟಿರುತ್ತಾರೆ. ಈ ಬಗ್ಗೆ ಶಾರದಮ್ಮ ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ದಾವೆ ಹೂಡಿದ ಕಾರಣ ಸಂಪೂರ್ಣ ಕಡತ ಅಲ್ಲಿ ನೀಡಲಾಗಿರುತ್ತದೆ. ದಿನಾಂಕ 26.1.2009 ರಂದು ನಡೆದ ಕೌನ್ಸಿಲ್ ಸಭೆಯಲ್ಲಿ ಶಾರದಮ್ಮನವರಿಗೆ ನೀಡಿರುವ ಜಮೀನು ಬೆಲೆಬಾಳುವ ನಿವೇಶನವಾಗಿದ್ದು ಅದನ್ನು ಪರಿಶೀಲಿಸಿ ಬದಲಿ ನಿವೇಶನ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಲು ತೀರ್ಮಾನಿಸಿರುವುದರಿಂದ ಅಸೆಸ್ಸಮೆಂಟ್ ವಹಿಯಲ್ಲಿ ಖಾತೆನ್ನು ತಡೆಹಿಡಿಯಲಾಗಿದೆ. ಆದರೆ ಈ ಆಸ್ತಿಯ ವಿಷಯದಲ್ಲಿ ದೊಡ್ಡಬಳ್ಳಾಪುರ ನ್ಯಾಯಾಲಯದಲ್ಲಿ ಓ.ಎಸ್ ನಂ 366/2008 ಅಂತ ದಾವೆ ಚಾಲ್ತಿಯಲ್ಲಿದ್ದು ಅದು ಮುಕ್ತಾಯವಾದ ನಂತರ ಕ್ರಮ ವಹಿಸಲಾಗುವುದು. ಆದದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿರುವ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

5. ದೂರುದಾರರು ಹಾಜರುಪಡಿಸಿದ ದೂರು, ಆಕ್ಷೇಪಣೆ, ದಾಖಲಾತಿಗಳು ಹಾಗೂ ಪ್ರತ್ಯುತ್ತರವನ್ನು ಪರಿಶೀಲಿಸಿದಾಗ ದೂರುದಾರರ ತಾಯಿ ಎಲ್. ಎಸ್. ಶಾರದಮ್ಮ ತಮ್ಮ 10 X 60 ಅಡಿ ನಿವೇಶನವನ್ನು ನಗರ ಸಭೆ ರಸ್ತೆಗಾಗಿ ಬಿಟ್ಟುಕೊಟ್ಟಿದ್ದು ಅದರ ಬದಲಾಗಿ ಮಾನ್ಯ ಜಿಲ್ಲಾಧಿಕಾರಿಗಳು ಬದಲಿ ನಿವೇಶನನ್ನು ಮಂಜೂರುಮಾಡಿದ್ದನ್ನು ಎದುರುದಾರರು ಒಪ್ಪಿಕೊಳ್ಳುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳು ಖಾತೆ ಸಂಖ್ಯೆ ಸಂ.1448/1288/4798 ರಲ್ಲಿ ವಿಸ್ತೀರ್ಣ 30 X 30 ಅಡಿ ನಿವೇಶನವನ್ನು ಎಲ್ಎಸ್ ಶಾರದಮ್ಮನವರಿಗೆ ಮಂಜೂರುಮಾಡಿದ ಬಗ್ಗೆ ದಾಖಲೆಗಳು ಲಭ್ಯವಿರುತ್ತವೆ. ಆ ಪ್ರಕಾರ ಆಗಿನ ಪೌರಾಯುಕ್ತರು ಬದಲಿ ನಿವೇಶನವನ್ನು ಎಲ್ ಎಸ್ ಶಾರದಮ್ಮನವರ ಹೆಸರಿಗೆ ನೋಂದಣಿಮಾಡುವುದನ್ನು ಬಿಟ್ಟು ಡಿ. ಸಿ ಶಿವಣ್ಣನವರಿಗೆ ನೊಂದಣಿಮಾಡಿದ ನೊಂದಾಯಿತ ದಾಖಲೆ ಲಭ್ಯವಿರುತ್ತದೆ. ಇದರ ಜೊತೆಗೆ ಎಲ್ ಎಸ್ ಶಾರದಮ್ಮನವರು ಈ ಬದಲಿ ನಿವೇಶನವನ್ನು ತಮ್ಮ ಸೋದರ ಸಂಬಂಧಿ ಡಿ.ಸಿ ಶಿವಣ್ಣನವರಿಗೆ ನೊಂದಣಿ ಮಾಡಲು ನೀಡಿದ ಒಪ್ಪಿಗೆ ಪತ್ರ ಲಭ್ಯವಿರುತ್ತದೆ. ಆದರೆ ಈ ಒಪ್ಪಿಗೆ ಪತ್ರ ನೋಟರಿ ಮಾಡಿಸಿದ್ದು ಉಪನೋಂದಣಾಧಿಕಾರಿಗಳಲ್ಲಿ ನೊಂದಣಿಯಾಗಿರುವುದಿಲ್ಲ.

6. ದೂರುದಾರರ ಪ್ರಕಾರ ಎಲ್ ಎಸ್ ಶಾರದಮ್ಮನವರು 1ನೇ ಎದುರುದಾರರಿಗೆ ಯಾವುದೇ ಒಪ್ಪಿಗೆ ಪತ್ರ ನೀಡಿರುವುದಿಲ್ಲ ಆದರೆ ಅವರು ಇದನ್ನು ಖೊಟ್ಟಿಯಾಗಿ ಸೃಷ್ಟಿಸಿ ಬೇರೊಬ್ಬ ವ್ಯಕ್ತಿಯಾದ ಡಿ. ಸಿ ಶಿವಣ್ಣ ನವರ ಹೆಸರಿನಲ್ಲಿ ಬದಲಿ ನಿವೇಶನ ನೊಂದಣಿ ಮಾಡಿರುತ್ತಾರೆ ಎಂದು ಆಪಾದಿಸಿರುತ್ತಾರೆ. ದೂರುದಾರರ ತಾಯಿ ತಮ್ಮ ಬೆಲೆ ಬಾಳುವ ನಿವೇಶನವನ್ನು ನಗರಸಭೆ ರಸ್ತೆಗಾಗಿ ನೀಡಿದಾಗ ಅದಕ್ಕೆ ಬದಲಿ ನಿವೇಶನವನ್ನು ಮಾನ್ಯ ಜಿಲ್ಲಾಧಿಕಾರಿಗಳು ಮಂಜೂರು ಮಾಡಿದ್ದು ಆ ಪ್ರಕಾರ ಎಲ್ ಎಸ್ ಶಾರದಮ್ಮನವರ ಹೆಸರಿನಲ್ಲಿ ನಿವೇಶನ ನೊಂದಣಿ ಮಾಡಬೇಕಾಗಿತ್ತು. ಒಂದು ವೇಳೆ ಶಾರದಮ್ಮನವರು ಒಪ್ಪಿಗೆ ಪತ್ರ ನೀಡಿದರೆ ಅದನ್ನು ತಿರಸ್ಕರಿಸಿ ಕಾನೂನು ಪ್ರಕಾರ ತಮ್ಮ ಕರ್ತವ್ಯ ಮಾಡಬೇಕಾಗಿತ್ತು ಆದರೆ ಆಗ ಕೆಲಸ ನಿರ್ವಹಿಸುತ್ತಿದ್ದ ಪೌರಾಯುಕ್ತರು ಒಪ್ಪಿಗೆ ಪತ್ರದ ಆಧಾರದ ಮೇಲೆ ಬೇರೆಯವರ ಹೆಸರಿನಲ್ಲಿ ನಿವೇಶನ ನೊಂದಣಿಮಾಡಿರುವುದು ಕರ್ತವ್ಯಲೋಪವೆಂದು ಕಂಡುಬರುತ್ತದೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೂರುದಾರರ ತಾಯಿ ಎಲ್ ಎಸ್ ಶಾರದಮ್ಮನವರಿಗೆ ಮಂಜೂರಿಯಾದ ಬದಲಿ ನಿವೇಶನ ಖಾತೆ ಸಂಖ್ಯೆ ಸಂ.1448/1288/4798 ರಲ್ಲಿ ವಿಸ್ತೀರ್ಣ 30 X 30 ಅಡಿ ನಿವೇಶನವನ್ನು ಅವರ ಹೆಸರಿನಲ್ಲಿ ಪುನ: ನೊಂದಣಿ ಮಾಡಿ ಅವರಿಗೆ ಸ್ವಾಧೀನ ನೀಡಲು ಕ್ರಮ ಕೈಗೊಳ್ಳುವಂತೆ ಸೂಕ್ತ ಕ್ರಮಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕೆಂದು ಸಕ್ಷಮ ಪ್ರಾಧಿಕಾರವನ್ನು ಕೋರಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

16-3-17

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

15/3